# ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಧೀಶರ ನ್ಯಾಯಾಲಯ, ರೋಣ

**ಅಸಲು ದಾವೆ ಸಂಖ್ಯೆ: 432/2025**

**ವಾದಿ :** ಶ್ರೀಮತಿ ರೇಣುಕಾ ಗಂಡ ಶಂಕ್ರಪ್ಪ ನಾಯ್ಕರ್

**ವಿರುದ್ಧ**

**ಪ್ರತಿವಾದಿ :** ತಿಪ್ಪಣ ಉರ್ಫ ಮದಕನಗೌಡ
ತಂದೆ: ಮಹಾದೇವಪ್ಪ ಹುಲ್ಲೂರ ಮತ್ತು ಇತರರು

**ಮಧ್ಯಂತರ ಅರ್ಜಿ ಸಂಖ್ಯೆ 01 ರ ಪಕ್ಷಗಾರರು**

**ಅರ್ಜಿದಾರರು :** ಶ್ರೀಮತಿ ರೇಣುಕಾ ಗಂಡ ಶಂಕ್ರಪ್ಪ ನಾಯ್ಕರ್

**ವಿರುದ್ಧ**

**ಎದುರುದಾರರು :** ತಿಪ್ಪಣ ಉರ್ಫ ಮದಕನಗೌಡ
ತಂದೆ: ಮಹಾದೇವಪ್ಪ ಹುಲ್ಲೂರ ಮತ್ತು ಇತರರು

**ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರ ಮೇಲಿನ ಆದೇಶ**

ವಾದಿಯು ಪ್ರಸ್ತುತ ಮಧ್ಯಾಂತರ ಅರ್ಜಿಯನ್ನು ಪ್ರತಿವಾದಿಯರ ವಿರುದ್ಧ ದಾವೆಯು ಇತ್ಯಾರ್ಥವಾಗುವವರೆಗೆ ತೊಂದರೆಯನ್ನು ನೀಡದಂತೆ ತಾತ್ಕಲಿಕ ನಿರ್ಭಂದಕಾಜ್ಞೆಯನ್ನು ನೀಡಬೇಕೆಂದು ಸಲ್ಲಿಸುತ್ತಾರೆ.

**2.** ವಾದಿಯು ತನ್ನ ಮಧ್ಯಾಂತರ ಅರ್ಜಿಯ ಜೊತೆಗೆ ತನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ತನ್ನ ಪ್ರಮಾಣಪತ್ರದಲ್ಲಿ ದಾವಾ ಆಸ್ತಿಯ ಮಾಲೀಕರಾಗಿ ಸ್ವಾಧೀನದಲ್ಲಿ ಇದ್ದು ಸಾಗುವಳಿ ಮಾಡಿಕೊಂಡು ಬಂದಿರುತ್ತೆನೆ. ಪ್ರತಿವಾದಿಯವರಿಗೆ ದಾವಾ ಆಸ್ತಿಯ ಮೇಲೆ ಯಾವುದೇ ರೀತಿಯಿಂದ ಸಂಬಂಧವಿರುವುದಿಲ್ಲ ಮತ್ತು ಯಾವುದೇ ಹಕ್ಕು ಹಿತಾಸಕ್ತಿಯು ಸಹ ಇರುವುದಿಲ್ಲ. ಪ್ರತಿವಾದಿಯವರು ಕಾನೂನುಬಾಹಿರವಾಗಿ ರೂ.2 ಲಕ್ಷಗಳಗೆ ಬೇಡಿಕೆ ಇಟ್ಟಿರುತ್ತಾರೆ. ವಾದಿಯು ಮೃದು ಸ್ವಭಾವದವಳಾಗಿದ್ದು, ವಾದಿಯು ಹಳ್ಳಿಯ ಮಹಿಳೆಯಾಗಿರುವ ಕಾರಣವನ್ನು ಇಟ್ಟುಕೊಂಡು ದಾವಾ ಆಸ್ತಿಯ 3 ಎಕರೆಯಲ್ಲಿ ಬೆಳೆದ ಬೆಳೆಯನ್ನು ಲೂಟಿ ಹೊಡೆಯಲು ಪ್ರಯತ್ನಿಸುತ್ತಿದ್ದಾರೆ ಹಾಗಾಗಿ ಪ್ರತಿವಾದಿಯವರು ವಾದಿಯವರಿಗೆ ತೊಂದರೆ ಕೊಡಬಾರದೆಂದು ಪ್ರತಿವಾದಿಯವರನ್ನು ತಾತ್ಕಾಲಿಕವಾಗಿ ನಿರ್ಭಂದಿಸುವಂತೆ ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**3.** ಪ್ರಸ್ತುತ ಅರ್ಜಿಗೆ ಸಂಬಂಧಿಸಿದಂತೆ ಪ್ರತಿವಾದಿಯವರು ತಕರಾರನ್ನು ಸಲ್ಲಿಸಿದ್ದು, ತಮ್ಮ ತಕರಾರಿನಲ್ಲಿ ಪ್ರಸ್ತುತ ವಾದಿಯು ಸಲ್ಲಿಸಿರುವ ಅರ್ಜಿಯಲ್ಲಿರುವ ಎಲ್ಲಾ ಅಂಶಗಳನ್ನು ಸ್ಪಷ್ಟವಾಗಿ ಅಲ್ಲಗಳೆದಿರುತ್ತಾರೆ. ಪ್ರಸ್ತುತ ದಾವೆಯ ಪ್ರತಿವಾದಿಯವರು ಊರಿನ ಹಿರಿಯರಾಗಿರುತ್ತಾರೆ. ವಾದಿಯವರು ಸದರಿ ಅರ್ಜಿಯನ್ನು ತಪ್ಪು ವ್ಯಕ್ತಿಗಳ ಹೆಸರಿನಲ್ಲಿ ಸಲ್ಲಿಸಿರುತ್ತಾರೆ. ಪ್ರತಿವಾದಿಯವರು ಶಿವನಗೌಡ ಮತ್ತು ಅಣ್ಣವ್ವ ರವರ ನಡುವೆ ದಿನಾಂಕ 04.06.2002 ರಂದು ವಾಟ್ನಿ ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಮುಂದುವರಿದು ವಾದಿಯು ಯವುದೇ ಕಾರಣವಿಲ್ಲದೇ ಪ್ರತಿವಾದಿಯವರ ವಿರುದ್ಧ ದಾವೆಯನ್ನು ದಾಖಲು ಮಾಡಿರುತ್ತಾರೆ. ಹಾಗಾಗಿ ಪ್ರಸ್ತುತ ಮಧ್ಯಂತರ ಅರ್ಜಿಯನ್ನು ವಜಾ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

**4.** ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದ ಸಮ್ಮುಖದಲ್ಲಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು.

**5.** ಉಭಯ ಪಕ್ಷಗಾರರ ವಾದವನ್ನು ಅಲಿಸಿದ ನಂತರ ಮತ್ತು ನ್ಯಾಯಾಲಯದ ಸಮ್ಮುಖದಲ್ಲಿ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

## <u>ಅಂಶಗಳು</u>

1. ವಾದಿಯು ತನ್ನ ಪರವಾಗಿ ಮೇಲ್ನೋಟದ ಪ್ರಕರಣ ಇರುವುದನ್ನು ತನ್ನ ಅರ್ಜಿಯಲ್ಲಿ ತೋರಿಸಿರುತ್ತಾರೆಯೇ?
2. ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲು ವಾದಿಯು ತನ್ನ ಪರವಾಗಿ ಅನುಕೂಲತೆಯ ಒಲವು ಇರುವುದನ್ನು ತನ್ನ ಅರ್ಜಿಯಲ್ಲಿ ತೋರಿಸಿರುತ್ತಾರೆಯೇ?
3. ವಾದಿಯು ತನಗೆ ನಿರ್ಭಂದಕಾಜ್ಞೆಯ ಆದೇಶವನ್ನು ಮಾಡದಿದ್ದರೆ ತನಗೆ ತುಂಬಲಾರದ ನಷ್ಟವಾಗುತ್ತದೆ ಎಂದು ತನ್ನ ಅರ್ಜಿಯಲ್ಲಿ ತೋರಿಸಿರುತ್ತಾರೆಯೇ?
4. ಯಾವ ಆದೇಶ?

**6.** ಈ ಮೇಲ್ಕಂಡ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸುತ್ತಿದ್ದೇನೆ ?

**ಅಂಶ ಸಂಖ್ಯೆ** 1 : **ಸಕಾರಾತ್ಮಕವಾಗಿ**

**ಅಂಶ ಸಂಖ್ಯೆ** 2 : **ಸಕಾರಾತ್ಮಕವಾಗಿ**

**ಅಂಶ ಸಂಖ್ಯೆ** 3 : **ಸಕಾರಾತ್ಮಕವಾಗಿ**

**ಅಂಶ ಸಂಖ್ಯೆ 4 :** **ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದಂತೆ.**

## ಕಾರಣಗಳು

7. **ಅಂಶ ಸಂಖ್ಯೆ 1 ರಿಂದ 3:–** 1 ರಿಂದ 3 ರಲ್ಲಿನ ವಿವಾದಾಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಮತ್ತು ಸಾಕ್ಷ್ಯಗಳು ಪುನಃ ಪುನರಾವರ್ತನೆಯಾಗುವುದರಿಂದ ಎಲ್ಲ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತಗೆದುಕೊಳ್ಳುತ್ತಿದ್ದೇನೆ.

8. ವಾದಿಯು ಪ್ರಸ್ತುತ ದಾವೆಯನ್ನು ಪ್ರತಿವಾದಿಗಳ ವಿರುದ್ಧ ಶಾಶ್ವತ ನಿರ್ಭಂದಕಾಜ್ಞೆಯ ಪರಿಹಾರವನ್ನು ಕೋರಿ ದಾವೆಯನ್ನು ಹೂಡಿರುತ್ತಾರೆ. ವಾದಿಯು ಪ್ರತಿವಾದಿಯ ವಿರುದ್ಧ ಪ್ರಸ್ತುತ ಅರ್ಜಿಯನ್ನು ತಾತ್ಕಾಲಿಕ ನಿರ್ಭಂದಕಾಜ್ಞೆಯ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ.

9. ವಾದಿಯು ಪ್ರಸ್ತುತ ಅರ್ಜಿಯಲ್ಲಿ ವಾದಿಯವರ ಶಾಂತಿಯುತ ಸ್ವಾಧೀನಕ್ಕೆ ಪ್ರತಿವಾದಿಯವರು ಅಡ್ಡಿಪಡಿಸುತ್ತಿದ್ದಾರೆ ಹಾಗಾಗಿ ಪ್ರತಿವಾದಿಯವರನ್ನು ನಿರ್ಭಂದಿಸಬೇಕೆಂದು ಕೋರಿಕೊಂಡಿರುತ್ತಾರೆ. ಸದರಿ ಅರ್ಜಿಗೆ ಸಂಬಂಧಿಸಿದಂತೆ ಪ್ರತಿವಾದಿಗಳು ತಕರಾರನ್ನು ಸಲ್ಲಿಸಿ ಸದರಿ ತಕಾರಾರಿನಲ್ಲಿ ವಾದಿಯು ತನ್ನ ಮಧ್ಯಂತರ ಅರ್ಜಿಯಲ್ಲಿ ಹೇಳಿರುವ ಸಂಗತಿಯನ್ನು ಸ್ಪಷ್ಟವಾಗಿ ಅಲ್ಲಗಳೆದಿರುತ್ತಾರೆ. ಹಾಗೆಯೇ ವಾದಿಯವರು ಊರಿನ ಹಿರಿಯರಾಗಿರುತ್ತಾರೆ. ದಿನಾಂಕ 04.06.2002 ರಂದು ಶಿವನಗೌಡ ಮತ್ತು ಅನಸವ್ವ ರವರ ನುಡವೆ ಆದಂತ ವಾಟ್ನಿ ಪತ್ರಕ್ಕೆ ಸಹಿ ಮಾಡಿದವರಾಗಿರುತ್ತಾರೆ ಎಂದು ಹೇಳಿರುತ್ತಾರೆ. ವಾದಿಯವರು ಹಾಜರುಪಡಿಸರುವ

ದಾಖಲಾತಿಗಳನ್ನು ಪರಿಶೀಲಿಸುವ ಮೊದಲು ದಿವಾಣಿ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 39 ನಿಯಮ 1 ಮತ್ತು 2 ನ್ನು ಪರಿಶೀಲಿಸುವುದು ಅವಶ್ಯಕವಾಗಿರುತ್ತದೆ.

**10.** ದಿವಾಣಿ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 39 ನಿಯಮ 1 ರಲ್ಲಿ ಯಾವುದೇ ದಾವೆಯಲ್ಲಿ ಪ್ರಮಾಣ ಪತ್ರದ ಮೂಲಕ (ಎ) ದಾವೆಯಲ್ಲಿ ವಿವಾದದಲ್ಲಿರುವ ಯಾವುದೇ ಸ್ವತ್ತು ಯಾವುದೇ ಪಕ್ಷಗಾರರಿಂದ ಹಾನಿ ಒಳಗಾಗಿರುವ ಅಥವಾ ಪರಭಾರೆಯಾಗುವ ಅಥವಾ ಡಿಕ್ರಿಯ ಅಮಲ್ಜಾರಿಯಲ್ಲಿ ಅಕ್ರಮವಾಗಿ ಮಾರಾಟವಾಗುವ ಅಪಾಯವಿದೆಯೆಂದು ಅಥವಾ (ಬಿ) ಪ್ರತಿವಾದಿಯು ತನ್ನ ಸಾಲಗಾರರಿಗೆ ಮೋಸ ಮಾಡುವ ದೃಷ್ಟಿಯಿಂದ ತನ್ನ ಸ್ವತ್ತನ್ನು ಸಾಗಿಸುವನೆಂದು ಅಥವಾ ವಿಲೆ ಮಾಡುವನೆಂದು ಅಥವಾ ಎದುರಿಸುವ ಉದ್ದೇಶವನ್ನು ಹೊಂದಿರುತ್ತಾರೆಂದು (ಸಿ) ದಾವೆಯಲ್ಲಿ ವಿವಾದದಲ್ಲಿರುವ ಯಾವುದೇ ಸ್ವತ್ತಿನ ಸಂಬಂಧದಲ್ಲಿ ಅದನ್ನು ವಾದಿಯ ಸ್ವಾಧೀನದಿಂದ ತಪ್ಪಿಸುವುದಾಗಿ ಆ ಬಗ್ಗೆ ವಾದಿಗೆ ಕ್ಷತಿಯನ್ನುಂಟು ಮಾಡುವುದಾಗಿ ಪ್ರತಿವಾದಿಯು ವಾದಿಯನ್ನು ಎದುರಿಸುತ್ತಾರೆಂದು ರುಜುವಾತು ಆದರೆ ವಿಲೆಯಾಗುವವರೆಗೆ ಅಥವಾ ಮುಂದಿನ ಆದೇಶವಾಗುವರೆಗೆ ಅಂತಹ ಕೃತ್ಯವನ್ನು ತಡೆಯಲು ನ್ಯಾಯಾಲಯವು ಆದೇಶದ ಮೂಲಕ ತಾತ್ಕಾಲಿಕ ನಿರ್ಭಂದಿಕಾಜ್ಞೆಯನ್ನು ಮಾಡಬಹುದು ಅಥವಾ ಆ ಸ್ವತ್ತು ಹಾಳಾಗುವುದನ್ನು, ಹಾನಿಗೊಳಗಾಗುವುದನ್ನು, ಪರಭಾರಿಯಾಗುವುದನ್ನು, ಮಾರಾಟವಾಗುವುದನ್ನು, ಸಾಗಿಸಲ್ಪಡುವುದನ್ನು ಅಥವಾ ವಿಲೇಯಾಗುವುದನ್ನು ಅಥವಾ ದಾವೆಯನ್ನು ವಿವಾದದಲ್ಲಿ ಇರುವ ಸ್ವತ್ತನ್ನು ವಾದಿಯ ಸ್ವಾಧೀನದಿಂದ ತಪ್ಪಿಸುವುದನ್ನು ಅಥವಾ ಆ ಬಗ್ಗೆ ವಾದಿಗೆ ಕ್ಷತಿಯುಂಟು ಮಾಡುವುದನ್ನು ತಡೆಯುವ ಮತ್ತು ಪ್ರತಿಬಂಧಿಸುವ ಉದ್ದೇಶದಿಂದ ಸೂಕ್ತವೆಂದು ಆಲೋಚಿಸುವಂತಹ ಇತರೇ ಆದೇಶಗಳನ್ನು ನ್ಯಾಯಾಲಯವು ಮಾಡಬಹುದು ಎಂದು ಇರುತ್ತದೆ.

**11.** ವಾದಿಯು ತನ್ನ ಮಧ್ಯಂತರ ಅರ್ಜಿಯ ಜೊತೆಗೆ ಸರ್ವೆನಂಬರ್ 26/2ಬ ಗೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತಾರೆ. ಅದೇ ರೀತಿಯಾಗಿ ಎಫ್.ಡಿ.ಪಿ ನಂ6/2016 ರ ಡಿಕ್ರಿ ಪ್ರತಿ, ಸದರಿ ಎಫ್.ಡಿ.ಪಿ.ನಂ.6/2016 ರಲ್ಲಿ ಸಲ್ಲಿಸಿದ ರಾಜೀ ಪತ್ರ ಮತ್ತು ಪೊಟೋಗಳನ್ನು ಹಾಜರುಪಡಿಸಿರುತ್ತಾರೆ. ಪ್ರತಿವಾದಿಯವರು ತನ್ನ ತಕರಾರಿನ ಜೊತೆಗೆ ದಿನಾಂಕ 29.07.2019 ರಂದು ಮಾಡಿಕೊಂಡ ಜಮೀನಿನ ಲಾವಣಿ ಪತ್ರವನ್ನು ಹಾಜರುಪಡಿಸಿರುತ್ತಾರೆ. ಪ್ರತಿವಾದಿ ಪರ ವಕೀಲರು ತಮ್ಮ ಮೌಖಿಕ ವಾದದಲ್ಲಿ ಪ್ರತಿವಾದಿಗಳು ಊರಿನ ಹಿರಿಯರಾಗಿರುತ್ತಾರೆ ಅವರಿಗೆ ದಾವಾ ಆಸ್ತಿಯ ಮೇಲೆ ಯವುದೇ ಹಕ್ಕು ಇರುವುದಿಲ್ಲ ಮತ್ತು ಅವರಿಗೆ ಸಂಬಂಧಿಸಿರುವುದಿಲ್ಲ. ಹಾಗಾಗಿ ವಾದಿಯವರಿಗೆ ತೊಂದರೆ ನೀಡುವ ಪ್ರಮೇಯ ಉಂಟಾಗುವುದಿಲ್ಲ. ಪ್ರತಿವಾದಿಯವರು ತಮ್ಮ ಮೇಲೆ ಸುಳ್ಳು ದಾವೆಯನ್ನು ದಾಖಲಿಸಿರುತ್ತಾರೆ ಎಂದು ಹೇಳಿರುತ್ತಾರೆ. ವಾದಿಯವರು ಸಲ್ಲಿಸಿರುವ ಮಧ್ಯಂತರ ಅರ್ಜಿಯ ಪುರಸ್ಕರಿಸಲು ಮೆಲ್ನೋಟದ ಪ್ರಕರಣ, ಅನುಕೂಲತೆಯ ಒಲವು ಮತ್ತು ತುಂಬಲಾರದ ನಷ್ಟವಾಗುತ್ತದೆ ಎನ್ನುವುದನ್ನು ಸ್ಪಷ್ಟವಾಗಿ ತೋರಿಸಬೇಕಾಗುತ್ತದೆ. ಸದರಿ ವಾದಿಯು ತನ್ನ ಪ್ರಮಾಣ ಪತ್ರದ ಜೊತೆಗೆ 2025-26 ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ಸದರಿ ಪಹಣಿ ಪತ್ರಿಕೆಗಳನ್ನು ಪರಿಶೀಲಿಸಿದಾಗ ಸರ್ವೆನಂಬರ್ 26/2ಬ ಗೆ ಸಂಬಂಧಿಸಿದ ಪಹಣಿ ಪತ್ರಿಕೆಯಾಗಿದ್ದು, ಸದರಿ ಪಹಣಿ ಪತ್ರಿಕೆಯಲ್ಲಿ ರೇಣುಕಾ ತಂದೆ ಶಂಕ್ರಪ್ಪ ನಾಯ್ಕುರ ಎಂದು ಇರುವುದು ಕಂಡು ಬಂದಿರುತ್ತದೆ. ಅದೇ ರೀತಿಯಾಗಿ ವಾದಿಯವರು ಹಾಜರುಪಡಿಸಿರುವ ಎಫ.ಡಿ.ಪಿ ನಂ.6/2016 ರಲ್ಲಿ ಸಲ್ಲಿಸಿರುವ ರಾಜೀ ಡಿಕ್ರಿಯಲ್ಲಿ ಸರ್ವೆನಂಬರ್ 26/2ಬ ವಿಸ್ತೀರ್ಣ 6 ಎಕರೆ 15 ಗುಂಟೆ ಜಮೀನು ಅನಸ್ವ ಮತ್ತು ರೇಣುಕಾ ರವರಿಗೆ ಹೋಗಬೇಕು ಎಂದು ನಮೂದು ಆಗಿರುವುದು ಕಂಡು ಬಂದಿರುತ್ತದೆ.

**12.** ಪ್ರಸ್ತುತ ಮಧ್ಯಂತರ ಅರ್ಜಿಯ ಜೊತೆಗೆ ವಾದಿಯವರು ಹಾಜರುಪಡಿಸಿರುವ ದಾಖಲಾತಿಗಳನ್ನು ಕೂಲಕುಂಶವಾಗಿ ಪರಿಶೀಲಿಸಿ ನೋಡಿದಾಗ ವಾದಿಯವರ ಪರವಾಗಿ ಮೇಲ್ನೋಟ್ಟದ ಪ್ರಕರಣ ಇರುವುದು ಕಂಡು ಬಂದಿರುತ್ತದೆ. ವಾದಿಯು ತನ್ನ ಅರ್ಜಿಯಲ್ಲಿ ಪ್ರತಿವಾದಿಯುವರು ತನ್ನ ಶಾಂತಿಯುತ ಸ್ವಾಧೀನಕ್ಕೆ ಅಡ್ಡಿಪಡಿಸುತ್ತಿದ್ದಾರೆ ಎಂದು ಕೇಳಿಕೊಂಡಿರುತ್ತಾರೆ. ಹಾಗೇನಾದರೂ ವಾದಿಯವರ ಪರವಾಗಿ ತಾತ್ಕಲಿಕ ನಿರ್ಭಂದಕಾಜ್ಞೆಯನ್ನು ನೀಡದಿದ್ದರೆ ವಾದಿಯವರಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ ಎನ್ನುವುದು ಮೇಲ್ನೋಟ್ಟಕ್ಕೆ ಕಂಡು ಬಂದಿರುತ್ತದೆ. ಪ್ರತಿವಾದಿ ಪರ ವಕೀಲರು ಹೇಳುವಂತೆ ತಮಗೆ ದಾವಾ ಆಸ್ತಿ ಯಾವುದೇ ರೀತಿಯಿಂದ ಸಂಬಂಧವಿರುವುದಿಲ್ಲ ಎಂದು ಹೇಳುವುದನ್ನು ಗಮನಿಸಿದಾಗ ಮತ್ತು ವಾದಿಯವರು ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ಗಮನಿಸಿದಾಗ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ನೋಡಿದಾಗ ವಾದಿಯವರ ಪರವಾಗಿ ಅನೂಕೂಲತೆಯ ಒಲವು ಇಲ್ಲದಿರುವುದು ಸ್ಪಷ್ಟ ವಾಗಿ ಕಂಡು ಬಂದಿರುತ್ತದೆ.

**13.** ವಾದಿಯು ಅರ್ಜಿಯನ್ನು ಪುರಸ್ಕರಿಸಲು ಮೆಲ್ನೋಟದ ಪ್ರಕರಣ, ಅನುಕೂಲತೆಯ ಒಲವು ಮತ್ತು ತುಂಬಲಾರದ ಹಾನಿಯಾಗಿರುವುದನ್ನು ತೋರಿಸಿರುವುದಿಲ್ಲ ಹಾಗಾಗೀ ಸದರಿ ಅರ್ಜಿಯನ್ನು ತಿರಸ್ಕರಿಸಬೇಕೆಂದು ಪ್ರತಿವಾದಿಯು ಹೇಳಿರುತ್ತಾರೆ. ಪ್ರಸ್ತುತ ದಾವೆಗೆ ಸಂಬಂಧಿಸಿದಂತೆ ನಿರ್ಭಂದಕಾಜ್ಞೆಯನ್ನು ನೀಡಲು ವಾದಿಯು ತನ್ನ ಪರವಾಗಿ ಮೇಲ್ನೊಟದ ಪ್ರಕರಣ ಇರುವುದನ್ನು ತೋರಿಸಿರುತ್ತಾರೆ ನ್ಯಾಯಾಲಯವು ಮಧ್ಯಂತರ ನಿರ್ಭಂದಕಾಜ್ಞೆಯ ಆದೇಶದ ಸಂದರ್ಭದಲ್ಲಿ ದಾವೆಯನ್ನು ಪೂರ್ಣಪ್ರಮಾಣದ ವಿಚಾರಣೆ ನಡೆಸುವಂತಿಲ್ಲ. ನಿರ್ಭಂದಕಾಜ್ಞೆಯ ಅರ್ಜಿಯ ಮೇಲೆ ಆದೇಶ ಮಾಡುವಾಗ ನ್ಯಾಯಾಲಯವು ಪ್ರತಿವಾದಿಗಳ ಬಗ್ಗೆ ಹಾಗೂ ಅರ್ಜಿ ಹಾಕಿಕೊಂಡವರ ಬಗ್ಗೆ ಪ್ರಮಾಣಿಕವಾಗಿ ವರ್ತಿಸಬೇಕು. ವಾದಿಯ

ಹಿತಾಸಕ್ತಿಯನ್ನು ಕಾಯಬೇಕಾದ ಎಚ್ಚರಿಕೆ ಹಾಗೂ ಸುರಕ್ಷತೆ ಕೂಡ ಅತೀ ಮುಖ್ಯವಾಗಿರುತ್ತದೆ ಹಾಗೂ ಉಭಯ ಪಕ್ಷಗಾರರ ಹಿತಾಸಕ್ತಿಯನ್ನು ನಿರ್ಭಂದಕಾಜ್ಞೆಯ ಆದೇಶವು ಕಾಯುವಂತಿರಬೇಕು.

**14.** ಪ್ರಸ್ತುತ ಅರ್ಜಿಯನ್ನು ಮತ್ತು ವಾದಿಯವರು ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ನೋಡಿದಾಗ ವಾದಿಯ ಪರವಾಗಿ ಮೇಲ್ನೋಟದ ಪ್ರಕರಣ, ವಾದಿಯವರ ಪರವಾಗಿ ಅನೂಕೂಲತೆಯ ಒಲವು ಇರುವುದು ಕಂಡು ಬಂದಿರುತ್ತದೆ. ಸದರಿ ಅರ್ಜಿಯಲ್ಲಿ ನಮೂದಿಸಿರುವ ದಾವಾ ಆಸ್ತಿಗೆ ಸಂಬಂಧಿಸಿದಂತೆ ದಾವೆಯು ಇತ್ಯಾರ್ಥವಾಗುವವರೆಗೆ ದಾವಾ ಆಸ್ತಿಯಲ್ಲಿ ತೊಂದರೆ ನೀಡದಂತೆ ನಿರ್ಭಂದಿಸಬೇಕೆಂದು ಕೇಳಿರುವ ಪರಿಹಾರವನ್ನು ನೋಡಿದಾಗ ಮತ್ತು ವಾದಿಯು ತಾನು ಸದರಿ ಅರ್ಜಿಯನ್ನು ಸಲ್ಲಿಸಿ ತನ್ನ ಮೌಖಿಕ ವಾದವನ್ನು ಮಂಡಿಸಿರುವುದನ್ನು ಗಮನಿಸಿದಾಗ ಪ್ರತಿವಾದಿಯವರು ವಾದಿಯವರಿಗೆ ತೊಂದರೆ ನೀಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ವಾದಿಯು ತನ್ನ ದಾವೆಯಲ್ಲಿ ಪ್ರತಿವಾದಿಯ ವಿರುದ್ಧ ಶಾಶ್ವತ ನಿರ್ಬಂದಕಾಜ್ಞೆಯ ಪರಿಹಾರವನ್ನು ಕೋರಿ ದಾವೆಯನ್ನು ದಾಖಲು ಮಾಡಿದ್ದು, ಸದರಿ ದಾವೆಗೆ ಮತ್ತು ಅದರಲ್ಲಿ ಕೇಳಿರುವ ಪರಿಹಾರಗಳಿಗೆ ಸಂಬಂಧಿಸಿದಂತೆ ದಾವೆಯನ್ನು ಇತ್ಯಾರ್ಥ ಮಾಡುವ ಕಾಲದಲ್ಲಿ ತಿಳಿದು ಬರುತ್ತದೆ. ಈ ಸಂಧರ್ಭದಲ್ಲಿ ಸದರಿ ಅರ್ಜಿಯನ್ನು ಇತ್ಯರ್ಥ ಮಾಡುವಾಗ ವಾದಿಯ ಅರ್ಜಿಗೆ ಸಂಬಂಧಿಸಿದಂತೆ ಮೇಲ್ನೋಟದ ಪ್ರಕರಣ, ವಾದಿಯ ಪರವಾಗಿ ಅನೂಕೂಲತೆಯ ಒಲವು ಇರುವುದು ಮತ್ತು ವಾದಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ ಎನ್ನುವುದನ್ನು ಪರಿಶೀಲಿಸುವುದಷ್ಟೆ ಅವಶ್ಯಕತೆ ಇರುತ್ತದೆ. ಸದರಿ ಅರ್ಜಿಯನ್ನು ಮತ್ತು ವಾದಿಯವರು ಹಾಜರುಪಡಿಸಿರುವ ದಾಖಾಲಾತಿಗಳನ್ನು ಮತ್ತು ಪ್ರತಿವಾದಿಯವರು ಸಲ್ಲಿಸಿದ ತಕರಾರು ಅರ್ಜಿಯನ್ನು ಮತ್ತು ಮಂಡಿಸಿದ ವಾದವನ್ನು ಗಮನಿಸಿ ನೋಡಿದಾಗ ವಾದಿಯ ಪರವಾಗಿ ಮೇಲ್ನೋಟದ

ಪ್ರಕರಣ ಇಲ್ಲದಿರುವುದು, ತನ್ನ ಪರವಾಗಿ ಅನೂಕೂಲತೆಯ ಒಲವು ಮತ್ತು ಸದರಿ ಅರ್ಜಿಯನ್ನು ಪುರಸ್ಕರಿಸದಿದ್ದರೇ ಪ್ರತಿವಾದಿಯವರಿಗೆ ತುಂಬಲಾರದ ನಷ್ಟ ಉಂಟಾಗುವುದಿಲ್ಲ ಎನ್ನುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಹಾಗಾಗೀ ಮೇಲ್ಕಂಡ ಅಂಶ ಸಂಖ್ಯೆ 1 ರಿಂದ 3 ಕ್ಕೆ ಸಕಾರಾತ್ಮಕವಾಗಿ ಉತ್ತರಿಸುತ್ತಿದ್ದೇನೆ.

**15. ಅಂಶ ಸಂಖ್ಯೆ 4–** ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡತೆ ಉತ್ತರಿಸುತ್ತಿದ್ದೇನೆ.

## ಆದೇಶ

**ದಿವಾಣಿ ಪ್ರಕ್ರಿಯ ಸಂಹಿತೆಯ ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ವಾದಿಯು ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ ಅ 1 ನ್ನು ಪುರಸ್ಕರಿಸಲಾಗಿದೆ.**

**ದಾವಾ ಆಸ್ತಿಗೆ ಸಂಬಂಧಿಸಿದಂತೆ ವಾದಿಯವರಿಗೆ ತೊಂದರೆ ಕೊಡದಂತೆ ಪ್ರತಿವಾದಿಗಳು, ಅವರ ನಂಬುಗೆಯ ಅನುಯಾಯಿಗಳು, ಸಹಾಯಕಾರರು, ಕೆಲಸಗಾರರು ಅಥವಾ ಅವರ ಪರವಾಗಿ ನಡೆದುಕೊಳ್ಳುವವರನ್ನು ತಾತ್ಕಲಿಕವಾಗಿ ದಾವೆಯು ಇತ್ಯಾರ್ಥವಾಗುವವರೆಗೆ ನಿರ್ಭಂಧಿಸಲಾಗಿದೆ.**

**ವೆಚ್ಚದ ಬಗ್ಗೆ ಯಾವುದೇ ಆದೇಶವಿರುವುದಿಲ್ಲ.**

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ನೀಡಿ, ಅವರು ಬೆರಳಚ್ಚು ಮಾಡಿದ ಮೇಲೆ ತಿದ್ದುಪಡಿಗಳನ್ನು ಪರಿಶೀಲಿಸಿ ದಿನಾಂಕ 07 ನೇ ಜನೇವರಿ 2026 ರಂದು ತೆರೆದ ನ್ಯಾಯಾಲಯದಲ್ಲಿ ತೀರ್ಪನ್ನು ಉಚ್ಚರಿಸಿದ್ದೇನೆ.)

**(ಶ್ರೀ. ವಿಜಯಕುಮಾರ. ಎನ್ )**
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ.ಗಳು, ರೋಣ.